# 2014-15 ನೇ ಸಾಲಿಗೆ ಆಯ್ಕೆಯಾದ ಹಾವೇರಿ ಜಿಲ್ಲೆಯ ಯುವ ಕೃಷಿ ಮಹಿಳೆ

## ಆವಿಷ್ಕಾರ ಮಾಡಿದ ಯುವ ಕೃಷಿ ಮಹಿಳೆ



**ಶ್ರೀಮತಿ ಶೋಭಾ ಮಂಜಪ್ಪ ತೋಟದ**
ಗ್ರಾಮ: ಹೆಡಿಗ್ಗೊಂಡ
ತಾ: ಬ್ಯಾಡಗಿ ಜಿ: ಹಾವೇರಿ
ಮೊ: 9945264466

ಬ್ಯಾಡಗಿ ತಾಲ್ಲೂಕಿನ ಹೆಡಿಗ್ಗೊಂಡ ಗ್ರಾಮದವರಾದ ಶ್ರೀಮತಿ ಶೋಭಾ ಮಂಜಪ್ಪ ತೋಟದರವರು ಕೃಷಿಯನ್ನು ತಮ್ಮ ಜೀವನ ಪದ್ಧತಿಯನ್ನಾಗಿ ರೂಢಿಸಿಕೊಂಡು ಬಂದಿದ್ದಾರೆ. ಇವರು ತಮ್ಮ 2.5 ಎಕರೆ ಜಮೀನಿನಲ್ಲಿ ಕೃಷಿಯಲ್ಲಿ ಸೂರ್ಯಕಾಂತಿ, ಮೆಣಸಿನಕಾಯಿ, ಕ್ಯಾಬೇಜ, ಗಟವಿನಜೋಳ, ಸೋಯಾಬೀನ್ ಬೆಳೆಗಳನ್ನು ಬೆಳೆಯುತ್ತಿದ್ದಾರೆ. ಇದರ ಜೊತೆಗೆ ಹೈನುಗಾರಿಕೆಯಲ್ಲಿ ಹೆಚ್ಚಿನ ಒತ್ತುಕೊಟ್ಟು ಕೊಟ್ಟಿಗೆ ಗೊಬ್ಬರಗಳಂದ ಎರೆಹುಳು ಗೊಬ್ಬರಗಳಂದ ಮಾಡಿಕೊಂಡು ಕೃಷಿಯಿಂದ 1 ಲಕ್ಷದವರೆಗೂ ಆದಾಯ ಪಡೆಯುತ್ತಿದ್ದಾರೆ. ಉತ್ತಮ ಮಾರುಕಟ್ಟೆ ಸಂಪರ್ಕ ಜಾಲ ಸಹ ಬೆಳೆಸಿಕೊಂಡಿದ್ದಾರೆ. ಮನೆಗೆ ಬೇಕಾದ ತರಕಾರಿಗಳನ್ನು ಜಮೀನಿನಲ್ಲಿ ಬೆಳೆದುಕೊಳ್ಳುವರು. ಇವರ ಉತ್ತಮವಾಗಿ ಗೊಬ್ಬರದ ಗುಂಡಿಗಳನ್ನು ಸಹ ನಿರ್ಮಿಸಿಕೊಂಡಿದ್ದಾರೆ. ಇವರು ಕೃಷಿ ಜಮೀನಿನಲ್ಲಿ ಸುಮಾರು 5 ಲಕ್ಷದವರೆಗೂ ಆದಾಯ ಹೊಂದಿದ್ದಾರೆ.